968 ಶ್ರೀ ಕಿಮ್ಮನೆ ರತ್ನಾಕರ್ : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ರಸ್ತೆನಿಧಿ ಅಡಿಯಲ್ಲಿ ಶಿವಮೊಗ್ಗ ಜಿಲ್ಲಾ ವ್ಯಾಪ್ತಿಯಲ್ಲಿ ರಸ್ತೆ ಅಭಿವೃದ್ಧಿಗಾಗಿ ಹಮ್ಮಿಕೊಂಡ ಯೋಜನೆಗಳಾವುವು (ವಿವರ ಒದಗಿಸುವುದು);

ಆ) ಈ ಯೋಜನೆಯ ಅಡಿಯಲ್ಲಿ ಶಿವಮೊಗ್ಗ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಎಷ್ಟು ಕಿ.ಮೀ. ರಸ್ತೆ ಅಭಿವೃದ್ಧಿಪಡಿಸಲಾಗಿದೆ ಹಾಗೂ ಅಭಿವೃದ್ಧಿಪಡಿಸಲಾಗುವುದು (ತಾಲ್ಲೂಕುವಾರು ಬಿಡುಗಡೆ ಮಾಡಿರುವ ಹಣದ ವಿವರ ನೀಡುವುದು);

ಇ) 2007–08 ರಿಂದ 2009–10ರವರೆಗೆ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ವತಿಯಿಂದ ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಎಷ್ಟು ಸೇತುವೆಗಳನ್ನು ನಿರ್ಮಾಣ ಮಾಡಲಾಗಿದೆ; ಬಾಕಿಯಿರುವ ಸೇತುವೆಗಳೆಷ್ಟು;

ಈ) ಶಿವಮೊಗ್ಗ ನಗರದಿಂದ ತೀರ್ಥಹಳ್ಳಿ ಮಾರ್ಗವಾಗಿ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿಯನ್ನು ತೀರ್ಥಹಳ್ಳಿ ಪಟ್ಟಣದೊಳಗೆ ಅಗಲೀಕರಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ;

ಉ) ಹಾಗಿದ್ದಲ್ಲಿ ತೀರ್ಥಹಳ್ಳಿ ಪಟ್ಟಣದ ಮಧ್ಯ ರಸ್ತೆ ಅಗಲೀಕರಣ ಕಾಮಗಾರಿಯನ್ನು ಎಂದಿನಿಂದ ಪ್ರಾರಂಭ ಮಾಡಲಾಗುವುದು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಶಿವಮೊಗ್ಗ ಜಿಲ್ಲಾ ವ್ಯಾಪ್ತಿಯಲ್ಲಿ 2007–08ರಿಂದ ಇಲ್ಲಿಯವರೆಗೆ (ಜೂನ್–2009ರವರೆಗೆ) ಕೇಂದ್ರ ರಸ್ತೆ ನಿಧಿ ಅಡಿ ಕೇಂದ್ರ ಸರ್ಕಾರದಿಂದ 17 ಕಾಮಗಾರಿಗಳು ರೂ.2150 ಲಕ್ಷಗಳಿಗೆ ಮಂಜೂರಾಗಿರುತ್ತವೆ. ವಿವರಗಳಿಗಾಗಿ ಪಟ್ಟಿ ಲಗತ್ತಿಸಿದೆ (ಅನುಬಂಧ–1).

ಆ) ಶಿವಮೊಗ್ಗ ಜಿಲ್ಲೆಯ ಭದ್ರಾವತಿ, ಸಾಗರ, ಶಿಕಾರಿಪುರ, ಶಿವಮೊಗ್ಗ, ಸೊರಬ ಹಾಗೂ ತೀರ್ಥಹಳ್ಳಿ ವ್ಯಾಪ್ತಿಯಲ್ಲಿ ಸುಮಾರು 105.00 ಕಿಮೀ. ಉದ್ದದ ರಸ್ತೆಯನ್ನು ಅಭಿವೃದ್ಧಿಪಡಿಸಲಾಗುತ್ತಿದೆ (ವಿವರಗಳು ಅನುಬಂಧ–1ರಲ್ಲಿ ಲಭ್ಯವಿದೆ).

ಇ) ತೀರ್ಥಹಳ್ಳಿಯ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 10 ಸೇತುವೆಗಳನ್ನು ತೆಗೆದುಕೊಂಡಿದ್ದು, 8 ಸೇತುವೆಗಳ ಕಾರ್ಯಗಳು ಪೂರ್ಣಗೊಂಡಿದ್ದು, ಉಳಿದ 2 ಸೇತುವೆಗಳ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆ.

ಈ) ರಾಷ್ಟ್ರೀಯ ಹೆದ್ದಾರಿ–13 ಶಿವಮೊಗ್ಗ ನಗರದಿಂದ ತೀರ್ಥಹಳ್ಳಿ ಮಾರ್ಗವಾಗಿ ಮಂಗಳೂರುವರೆಗಿನ ರಸ್ತೆಯನ್ನು ದ್ವಿಪಥಗೊಳಿಸುವ ಮತ್ತು

ಪೇವ್ಡ್ ಶೋಲ್ಡರ್ ನಿರ್ಮಿಸುವ ಪ್ರಸ್ತಾವನೆಯು ಎನ್‌ಹೆಚ್‌ಡಿಪಿ IVಎ ರಲ್ಲಿ ಸೇರಿರುತ್ತದೆ.

ಊ) ಈ ಕಾಮಗಾರಿಗಳನ್ನು ಸಾರ್ವಜನಿಕ ಖಾಸಗಿ ಪಾಲುದಾರಿಕೆಯ ಮುಖಾಂತರ ಕೈಗೊಳ್ಳಲು ಉದ್ದೇಶಿಸಿದೆ. ಇದರ ಸಾಧ್ಯ ಸಾಧ್ಯತೆಗಳನ್ನು ಪರಿಶೀಲಿಸುವ ಹಾಗೂ ಯೋಜನಾ ವರದಿ ತಯಾರಿಸುವ ಸಲುವಾಗಿ ದಿನಾಂಕ: 6–7–2009ರಲ್ಲಿ ಮೆ: Feedback venture Pvt. Ltd. ಇವರನ್ನು ತಾಂತ್ರಿಕ ಸಮಾಲೋಚಕರನ್ನಾಗಿ ನೇಮಿಸಲಾಗಿರುತ್ತದೆ.

968 Sri. Kimmane Rathnakar : Hon'ble Minister for Public Works kindly answer to the below question?

a) What are the projects taken up for improvement of roads under CRF scheme in Shimoga District? (details to be furnished);

b) How many kilometers road is improved and being improved in all the taluks of Shimoga Dist (Taluk wise amount released details is to be furnished).

c) How many bridges have been constructed by Karnataka Road Development Corporation from 2007-08 to 2009-10, how many bridges are pending in Thirthahalli Assembly Constituency;

d) Whether there is any proposal before the Government for widening of National Highway from Shimoga city passing through Thirthahalli; particularly in thirthahalli town limits;

e) If so, when the widening of road in Thirthahalli town limit will b commenced;

Sri C.M.UDASI (Minister for Public Works Department):

a) From 2007-08 to June 2009, 17 works amounting to Rs.2150.00 lakhs have been approved by the Central Government unde CRF Scheme in Shimoga Dist (Datils enclosed in Annexure-I).

b) About 105.00 kilometers length of roads have been taken up for improvements in Bhadravati, Sagara, Shikaripura, Shmoga, Soraba and Thirthahalli Taluks (Details enclosed in Annexure).

c) There are totally 10 bridges in Thirthahalli constituency out of which 8 bridges are completed, balance 2 bridges are to be started.

d) The proposal for widening to two lane with paved shoulder of NH-13 from Shimoga city to Mangalore via Thirthahalli is included in NHDP-IV Programme.

e) The proposal to take up this project through Public Private Participation, consultants M/s Feed back venture Pvt. Ltd. Have been appointed by the Ministry on 6-7-2009 for taking up of feasibility study and preparation of detailed project report.

ಹುಣಸೂರು ತಾಲ್ಲೂಕಿನ ಪ್ರವಾಸಿ ತಾಣಗಳ ಅಭಿವೃದ್ಧಿ ಬಗ್ಗೆ.

919 ಶ್ರೀ ಮಂಜುನಾಥ್.ಹೆಚ್.ಪಿ. : ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕಿನಲ್ಲಿ ಪ್ರವಾಸಿ ತಾಣಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಪ್ರವಾಸೋದ್ಯಮ ಇಲಾಖೆಯಿಂದ ಗುರುತಿಸಿರು ಸ್ಥಳಗಳು ಯಾವುವು;

ಇ) ಈ ಪ್ರವಾಸಿ ಸ್ಥಳಗಳ ಅಭಿವೃದ್ಧಿಗಾಗಿ ಹಾಲಿ ಅನುಷ್ಠಾನ ಗೊಂಡಿರುವ ಕಾರ್ಯಕ್ರಮಗಳು ಮತ್ತು ಹಮ್ಮಿಕೊಂಡಿರುವ ಕಾರ್ಯಕ್ರಮಗಳು ಯಾವುವು ಹಾಗೂ ಅದಕ್ಕಾಗಿ ಬಿಡುಗಡೆಗೊಂಡಿರುವ ಅನುದಾನವೆಷ್ಟು?

ಶ್ರೀ ಜಿ.ಜನಾರ್ಧನ ರೆಡ್ಡಿ (ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು) :

ಅ) ಹೌದು

Yes.

ಆ) ಹುಣಸೂರು ತಾಲ್ಲೂಕಿನಲ್ಲಿ ಶ್ರೀ ಗೊಮ್ಮಟಗಿರಿ ಕ್ಷೇತ್ರವನ್ನು ಹಾಗೂ ನಾಗರಹೊಳೆ ರಾಷ್ಟ್ರೀಯ ಉದ್ಯಾನವನಗಳನ್ನು ಪ್ರವಾಸಿ ತಾಣಗಳನ್ನಾಗಿ ಗುರುತಿಸಲಾಗಿದೆ.

Sri Gommatagiri and Nagarahole National Park are identified as Tourist sports in Hunasur Taluk.

ಇ) ಅನುದಾನದ ಲಭ್ಯತೆಯ ಆಧಾರದ ಮೇಲೆ ಗೊಮ್ಮಟಗಿರಿ ಬೆಟ್ಟಕ್ಕೆ ಮೆಟ್ಟಿಲುಗಳ ದುರಸ್ಥಿ ಹಾಗೂ ರೈಲಿಂಗ್ಸ್ ಅಳವಡಿಸಲು ಉದ್ದೇಶಿಸಲಾಗಿದೆ